OS No. 87/2022

PW-2

**(ಇಂದು ದಿಃ 19-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ.SKD ವಕೀಲರಿಂದಃ-**

ನನಗೆ ಪ್ರತಿವಾದಿಯರ ತಂದೆ ರಾಮಪ್ಪ ಪರಿಚಯ ಇದ್ದರು. ನಾಗಪ್ಪರವರಿಗೆ 3 ಜನ ಮಕ್ಕಳು, ಅವರುಗಳೆಂದರೆ ರಾಮಪ್ಪ, ಮೊಗಲಪ್ಪ ಮತ್ತು ಸಾಬಣ್ಣ ಎಂದರೆ ಸರಿ. ಪ್ರತಿವಾದಿಯರ ಮನೆಯ ಹಿಂದೆ ಜಾಗೀರ್ದಾರ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ, ಮನೆಯ ಹಿಂದೆ ಬೇರೆ ಮನೆ ಅಥವಾ ಜಮೀನು ಇಲ್ಲ, ನಾನು ರಾಗಾಪುರದಲ್ಲಿ ವಾಸವಿದ್ದೇನೆ. ನಾನು ಹೈದ್ರಾಬಾದ್ ನಲ್ಲಿ ವಾಸವಿದ್ದೇನೆ ಎಂದರೆ ಜೀವನ ನಿರ್ವಹಣೆಗೆ ಹೋಗಿದ್ದೇವೆ. ಪ್ರತಿವಾದಿಯರು ನರಸಮ್ಮ ಗಂಡ ನಾಗಪ್ಪನ ಮೊಮ್ಮಕ್ಕಳು ಎಂದರೆ ಸರಿ. ನರಸಮ್ಮನಿಗೆ ಇಬ್ಬರು ಗಂಡಂದಿರು. ಮೊದಲನೇ ಗಂಡನ ಹೆಸರು ನನಗೆ ಗೊತ್ತಿಲ್ಲ, 2ನೇ ಗಂಡನ ಹೆಸರು ನಾಗಪ್ಪ, ನಾಗಪ್ಪನ ಕುಟುಂಬಕ್ಕೆ ಇದ್ದ ಆಸ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ, ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ, ನರಸಮ್ಮ ನ ಮೊದಲ ಗಂಡ ಅಣ್ಣ ಸಾರಮ್ಮ ಗ್ರಾಮ ತೆಲಂಗಾಣದವರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ವಾದಿ ಮಾತು ಕೇಳಿಕೊಂಡು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

ಕೋರ್ಟ ಪ್ರಶ್ನೆ ಃ ರಾಮಪ್ಪ ಯಾರ ಮಗ ?

ರಾಮಪ್ಪ ನರಸಮ್ಮನ ಮಗ ನನಗೆ ಆತನ ತಂದೆ ಹೆಸರು ಗೊತ್ತಿಲ್ಲ,

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**

**ಸೇಡಂ.**